



ಅರುಣ ಪಿ. ಭಟ್ಟ

## ವಾರದ ಭವಿಷ್ಯ 24.10.2019ರಿಂದ 30.10.2019ರವರೆಗೆ




ಸೋದರರ ಜತೆ ಚರ್ಚೆ ನಡೆಸಲಿದ್ದೀರಿ. ನಿಮಗೆ ವಹಿಸಿದ ಜವಾಬ್ದಾರಿಯನ್ನು ನಿರ್ವಹಿಸುತ್ತೀರಿ. ರಾಜಕೀಯದ ಬದುಕು ವೃದ್ಧಿಯಾಗುತ್ತಾ ಸಾಗುತ್ತದೆ. ವಾರದ ಮಧ್ಯ ಭಾಗದಲ್ಲಿ ಉದ್ಯೋಗಸ್ಥರಿಗೆ ಪ್ರಗತಿ ಕಾಣುತ್ತದೆ.

**ಶುಭದಿನ: 25.** ಸೌಂದರ್ಯ ಲಹರಿ ಪಠಿಸಿರಿ.




ವ್ಯಾಪಾರ ವ್ಯವಹಾರದ ವಿಸ್ತರಣೆ ಸಲುವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರುಗಳು ಕಾಣಿಸಿಕೊಳ್ಳಬಹುದು. ವಾರದ ಮಧ್ಯ ಭಾಗದಲ್ಲಿ ಪಾರ್ಟಿಗಳಲ್ಲಿ ಹೆಚ್ಚು ಭಾಗವಹಿಸುವ ಸಾಧ್ಯತೆಗಳಿವೆ.

**ಶುಭದಿನ: 27.** ಶಿವಕವಚ ಪಠಿಸಿರಿ




ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಈಗ ಉತ್ತಮ ಪ್ರತಿಫಲ ದೊರೆಯಲಿದೆ. ಕ್ರೀಡೆ ಹಾಗೂ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮುಂದುವರಿಸಲಿದ್ದೀರಿ. ಆರೋಗ್ಯದಲ್ಲಿ ಸಮಸ್ಯೆಯಾಗಿ, ಆಸ್ಪತ್ರೆಗೆ ದಾಖಲಾಗಬೇಕಾದ ಸ್ಥಿತಿ ನಿರ್ಮಾಣ ಆಗುತ್ತದೆ.

**ಶುಭದಿನ: 28.** ಕಾಲಭೈರವನ ಸೇವೆ ಮಾಡಿರಿ.




ವಾರದ ಮಧ್ಯ ಭಾಗದಲ್ಲಿ ನಿಮ್ಮ ಪಾಲಿನ ಗ್ರಹಗತಿ ಸ್ವಲ್ಪ ಮಟ್ಟಿಗೆ ಸಕಾರಾತ್ಮಕವಾಗಿದೆ. ಆದ್ದರಿಂದ ವೈವಾಹಿಕ ಜೀವನ ಸುಮಧುರವಾಗಿರುತ್ತದೆ. ಈ ಅವಧಿಯಲ್ಲಿ ನೀವು ಹೊಸ ವ್ಯಾಪಾರ ವ್ಯವಹಾರ ಆರಂಭಿಸುವ ಸಾಧ್ಯತೆಗಳಿವೆ.

**ಶುಭದಿನ: 29.** ಚಂಡಿ ಪಾರಾಯಣ ಮಾಡಿರಿ.




ನಿಮ್ಮ ಸ್ಥಾನ ಉತ್ತಮಗೊಳ್ಳಲಿದೆ. ವಾರದ ಮಧ್ಯ ಭಾಗದಲ್ಲಿ ಇತರರು ನಿಮಗೆ ತೊಂದರೆ ನೀಡುತ್ತಾರೆ. ಅವರಿಂದ ವ್ಯಾಪಾರ ವ್ಯವಹಾರದಲ್ಲಿ ನೀವು ನಷ್ಟ ಅನುಭವಿಸಲಿದ್ದೀರಿ. ಈ ಅವಧಿಯಲ್ಲಿ ಆರೋಗ್ಯದ ವಿಚಾರದಲ್ಲಿ ಏರುಪೇರು ಆಗಲಿದೆ.

**ಶುಭದಿನ: 29.** ಲಿಂಗಾಷ್ಟಕ ಪಠಣ ಮಾಡಿರಿ.




ಕೆಲವರಿಗೆ ಏಕತಾನತೆ ಕಾಡಬಹುದು. ಉದ್ಯೋಗದಲ್ಲಿ ಸಕಾರಾತ್ಮಕ ವಾತಾವರಣ. ಈ ಅವಧಿಯಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಉತ್ತಮ ಮೊತ್ತವೊಂದು ನಿಮಗೆ ಬರಲಿದೆ.

**ಶುಭದಿನ: 28.** ಸಂಕಷ್ಟಹರ ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯಮಿಗಳಿಗೆ ಉತ್ತಮವಾದ ಸಮಯ. ನೆರೆಹೊರೆಯವರ ಜತೆಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳಲು ಹಲವು ಬಗೆಯಲ್ಲಿ ಅವಕಾಶ ದೊರೆಯಲಿದೆ. ಅವರಿಗೆ ಬೆಂಬಲ ಸೂಚಿಸಲು, ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತೀರಿ.

**ಶುಭದಿನ: 26.** ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಿಸಿರಿ.




ವಾರದ ಮಧ್ಯ ಭಾಗದಲ್ಲಿ ಹತ್ತಿರದ ಸ್ಥಳವೊಂದಕ್ಕೆ ಪ್ರವಾಸ ತೆರಳುವ ಸಾಧ್ಯತೆಗಳಿವೆ. ಸಾಮಾಜಿಕವಾಗಿ ನಿಮ್ಮ ಸ್ಥಾನಮಾನ ಹೆಚ್ಚಾಗಲಿದೆ. ಇದರಿಂದ ಸಂತೋಷವಾಗಲಿದ್ದೀರಿ. ವಾರದ ಅಂತ್ಯಕ್ಕೆ ಉದ್ಯಮಿಗಳಿಗೆ ಶುಭ ಸುದ್ದಿ.

**ಶುಭದಿನ: 28.** ಲಕ್ಷ್ಮೀ ನಾರಾಯಣ ಪಾರಾಯಣ ಮಾಡಿರಿ.




ದೈನಂದಿನ ಕಾರ್ಯ ಕಲಾಪಗಳಲ್ಲೇ ಉತ್ಸಾಹ. ನಿಮ್ಮ ಗುರಿಗಳ ಪೈಕಿ ಒಂದೊಂದಾಗಿ ಪೂರ್ತಿಗೊಳಿಸುತ್ತೀರಿ. ನಿಮ್ಮ ವ್ಯಕ್ತಿತ್ವದಲ್ಲೇ ಸಕಾರಾತ್ಮಕತೆ ಕಾಣಿಸಿಕೊಳ್ಳುತ್ತದೆ. ಜ್ಞಾನ, ಮನಸ್ಸು. ಉದ್ಯೋಗಸ್ಥರಿಗೆ ಕೆಲವು ಸಮಸ್ಯೆಗಳು ಕಾಡುತ್ತದೆ.

**ಶುಭದಿನ: 25.** ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವೈವಾಹಿಕ ಜೀವನದಲ್ಲಿ ಅಸಮಾಧಾನ ಕಾಣಿಸಿಕೊಳ್ಳುತ್ತದೆ. ಸಂಗಾತಿ ಜತೆಗೆ ಭಿನ್ನಾಭಿಪ್ರಾಯ. ಈಗಾಗಲೇ ಒತ್ತಡ ಎದುರಿಸುತ್ತಿರುವ ಸಂಬಂಧಗಳಲ್ಲಿ ಮತ್ತಷ್ಟು ಉದ್ವಿಗ್ನ ಪರಿಸ್ಥಿತಿ ಏರ್ಪಡುತ್ತದೆ. ಕೌಟಂಬಿಕ ಜೀವನದಲ್ಲಿ ಪ್ರಗತಿ ಇದೆ.

**ಶುಭದಿನ: 26.** ವಿಷ್ಣು ಸಹಸ್ರನಾಮ ಪಠಿಸಿರಿ.




ನಿಮ್ಮೊಳಗಿನ ತಾಜಾತನವನ್ನು ಉಳಿಸಿಕೊಳ್ಳಿ. ಆದಾಯ ಮೂಲದಿಂದ ಹೆಚ್ಚುವರಿಯಾಗಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ಇದರಿಂದ ನಿಮ್ಮ ಸಂತೋಷ ಹೆಚ್ಚಾಗಲಿದೆ.

**ಶುಭದಿನ: 29.** ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕೆಲಸವನ್ನು ಶ್ರದ್ಧೆಯಿಂದ ಮಾಡಿ. ಆರೋಗ್ಯ ಚೆನ್ನಾಗಿರುತ್ತದೆ. ಈ ಸಮಯದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದರಿಂದ ಸಕಾರಾತ್ಮಕ ಯೋಚನೆ ನಿಮ್ಮಲ್ಲಿ ಮೂಡುತ್ತದೆ. ವೈಯಕ್ತಿಕ ವಿಚಾರಗಳು ನೀವು ಅಂದುಕೊಂಡ ರೀತಿಯಲ್ಲಿ ನಡೆಯುವುದಿಲ್ಲ.

**ಶುಭದಿನ: 30.** ಹನುಮಾನ್ ಚಾಲೀಸ್ ಓದಿರಿ.

